ಓ. ಎಸ್ . 16/2017 ಡಿ.ಡಬ್ಲ್ಯೂ - 1 ಈಶ್ವರ ಸಿಡ್ನಾಳೆ

( ದಿನಾಂಕ 9-12-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು)

**ಮುಂದುವರೆದ ವಾಟಿ ಸವಾಲು : ವಾದಿ ಪರ ಶ್ರೀ ಆರ್ ವಿ ಜೆ ವಕೀಲರಿಂದ -**

3. ಸಾಕ್ಷಿ ಈಗ ತಮ್ಮ ಹತ್ತಿರ ಇರುವ ಕಛೇರಿಯ ದಾಖಲೆಗಳನ್ನು ತಂದಿರುತ್ತಾರೆ. ಈ ದಾವಾ ಆಸ್ತಿಯನ್ನು ಬಶೆಟ್ಟಪ್ಪ ಜಿರಳಿ ಇವರು ದಿನಾಂಕ 6-4-1984 ರಂದು ಖರೀದಿಗೆ ಪಡೆದಿದ್ದರು ಎಂದರೆ ನಿಜ. ಆ ಪ್ರಕಾರ ಅವರ ಹೆಸರು ಪುರಸಭೆಯ ರಿಕಾರ್ಡನಲಿ ಎಂಟ್ರಿ ಆಗಿದೆ ಎಂದರೆ ನಿಜ. ಹುಕ್ಕೇರಿಯಲ್ಲಿ 1974 ರಲ್ಲಿ ಸಿ ಟಿ ಸರ್ವೆ ಆಗಿದೆ ಎಂದರೆ ನಿಜ. ಸಿ ಟಿ ಸರ್ವೆ ರಿಕಾರ್ಡನಲ್ಲಿಯೂ ಸಹ ಬಶೆಟ್ಟಪ್ಪ ಜಿರಳಿ ಇವರ ಹೆಸರು ದಾಖಲ ಆಗಿದೆ ಎಂದರೆ ನಿಜ. ವಾದಿಯ ಮನೆತನದಲ್ಲಿ ದಾವಾ ಆಸ್ತಿ ಕುರಿತು ವಾಟ್ನಿ ಆಗಿದೆ ಎಂದರೆ ನಿಜ. ಅದು ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ಓ ಎಸ್ ನಂ. 32/2008 ಎಂದು ರಾಜಿ ಆಗಿದೆ ಎಂದರೆ ನಿಜ. ಸದರಿ ರಾಜಿ ಡಿಕ್ರಿಯಲ್ಲಿ ವಾದಿಯ ಹೆಸರಿಗೆ ದಾವಾ ಆಸ್ತಿಗಳು ಬಂದಿವೆ ಎಂದರೆ ನಿಜ. ರಾಜಿ ಡಿಕ್ರಿ ಪ್ರಕಾರ ವಾದಿಯ ಹೆಸರು ಪುರಸಭೆ ರಿಕಾರ್ಡನಲ್ಲಿ ದಾವಾಸ್ತಿಗೆ ಸಂಬಂಧಪಟ್ಟಂತೆ ದಾಖಲ ಆಗಿದೆ ಎಂದರೆ ನಿಜ. ಅದು 1998 ರಲ್ಲಿ ದಾಖಲ ಆಗಿದೆ ಎಂದು ತಾವು ತಂದಿರುವ ದಾಖಲೆಗಳನ್ನು ನೋಡಿ ಹೇಳುತ್ತಾರೆ. ಡಿಕ್ರಿ ಪ್ರಕಾರ ವಾದಿಯ ಹೆಸರು ದಾವಾ ಆಸ್ತಿಗಳಿಗೆ ದಾಖಲ ಆಗಿದೆ ಎಂದರೆ ನಿಜ. ಶಿವಾನಂದ ಕೊಟ್ಟಂತಹ ಬಿಲ್ಡಿಂಗ ಪರಮಿಶನ ಅರ್ಜಿಯನುನ ದಿನಾಂಕ 6-8-2009 ರಂದು ಕೊಟ್ಟಿದ್ದೆವು ಎಂದರೆ ನಿಜ. ಆ ಬಿಲ್ಡಿಂಗ ಅರ್ಜಿಗೆ ಬ್ಲ್ಯೂ ಪ್ರಿಂಟ ಸಹ ಲಗತ್ತು ಮಾಡಿದ್ದರು ಎಂದರೆ ನಿಜ. ಆ ಬ್ಲ್ಯೂ ಪ್ರಿಂಟ ನಾವು ಮಂಜೂರು ಮಾಡಿದ್ದೆವು ಎಂದರೆ ನಿಜ. ಆದರೆ ವಾದಿ ಬ್ಲ್ಯೂ ಪ್ರಿಂಟ ಪ್ರಕಾರ ತನ್ನ ಕಟ್ಟಡವನ್ನು ಕಟ್ಟಲಿಲ್ಲಎಂದು ಹೇಳುತ್ತಾರೆ . ಕಟ್ಟಡ ಯಾವಾಗ ಪೂರ್ಣ ಆಗಿದೆ ಎಂಬ ಪ್ರಶ್ನೆಗೆ ಸಾಕ್ಷಿ ಅವರು ಕಂಪ್ಲೀಶನ ಸರ್ಟಿಫಿಕೇಟ ತೆಗೆದುಕೊಂಡಿಲ್ಲಎಂದು ಹೇಳುತ್ತಾರೆ. ನಾವು ಕಂಪ್ಲೀಶನ ಸರ್ಟಿಫಿಕೇಟ ಕೊಟ್ಟಿದ್ದೇವೆ ಎಂದರೆ ಸರಿಯಲ್ಲ.

4. 2016 ರಲ್ಲಿ ವಾದಿ ಅತಿಕ್ರಮಣ ಮಾಡಿದ್ದಾನೆ ಎಂದು ಪುರಸಭೆಗೆ ಗೊತ್ತಾಯಿತು. ಆ ಸಮಯದಲ್ಲಿ ಸಾರ್ವಜನಿಕರು ವಾದಿ ಮತುತ ಇತರರು ಸೇರಿ ಬೆಳವಿ ರಸ್ತೆಯನ್ನು ಅತಿಕ್ರಮಣ ಮಾಡಿದ್ದಾರೆ ಎಂದು ಪುರಸಭೇಗೆ ದೂರು ಕೊಟ್ಟಿದ್ದರಿಂದ ನಾವು ಎ ಡಿ ಎಲ್ ಆರ್ ಅವರ ಕಡೆಯಿಂದ ಅಳತೆ ಮಾಡಿಸಿದ್ದೇವೆ ಹಾಗೂ ಕಿ ಡಿ ಎಲ್ ಆರ್ ಅವರು ತಮ್ಮ ವರದಿಯಲ್ಲಿ

ಅತಿಕ್ರಮಣದ ಬಗ್ಗೆ ಸ್ಪಷ್ಟವಾಗಿ ನಮೂದು ಮಾಡಿದ್ದಾಗಿ ಹೇಳುತ್ತಾರೆ. ವಾದಿಯು ಸರಕಾರದ 50 ಚದರ ಅಡಿ ಅತಿಕ್ರಮಣ ಮಾಡಿದ್ದಾರೆ . ವಾದಿಯು ಕೆನಾಲ ಹಾಗೂ ಗಟಾರನ್ನು ಅತಿಕ್ರಮಣ ಮಾಡಿದ್ದು ಅದು ಸಿಟಿಎಸ್ ನಂ. 1225 ಎಂದು ನಮೂದು ಇರುತ್ತದೆ. ಸದರಿ ಕೆನಾಲ ಮತ್ತು ಗಟಾರಗೆ ಸಿಟಿಎಸ್ ನಂಬರ ನಮೂದು ಇರುವುದಿಲ್ಲ. ಸಿಟಿಎಸ್ ನಂ. 1225 ಗೆ ಮಾಲೀಕರು ಯಾರು ಎಂದರೆ ಅದಕ್ಕೆ ಮಾಲೀಕರು ಸರಕಾರ ಎಂದು ಹೇಳುತ್ತಾರೆ. ಸದರಿ ಆಸ್ತಿ ಸರಕಾರದ್ದು ಎಂದು ತೋರಿಸಲು ನನ್ನ ಬಳಿ ಪಿಟಿ ಶೀಟ ಮಾತ್ರ ಇರುತ್ತದೆ. ಸಿಟಿಎಸ್ ನಂ. 1225 ಸರಕಾರದ ಆಸ್ತಿ ಎಂದು ತೋರಿಸಲು ಪುರಸಭೆಯಲ್ಲಿ ದಾಖಲೆ ಲಭ್ಯ ಇಲ್ಲ. ಸದರಿ ಆಸ್ತಿ ಬಗ್ಗೆ ಸಿಟಿ ಸರ್ವೆ ಇಲಾಖೆಯಲ್ಲಿ ದಾಖಲೆ ಲಭ್ಯ ಇರಬಹುದು. ನಾನು ಅದನ್ನು ತೆಗೆಸಿ ನೋಡಿರುವುದಿಲ್ಲ ಎಂದರೆ ನಿಜ. ಅದನ್ನು ನೊಡಲು ನನಗೆ ತೊಂದರೆ ಇಲ್ಲ ಎಂದರೆ ನಿಜ.

5. ಶಿವಾನಂದ ಜಿರಲಿ ಇವರ ಆಸ್ತಿಯ ಚಕಬಂದಿ ನನಗ ಈಗ ಹೇಳಲು ಬರುವುದಿಲ್ಲ. ನಾನು ಅದನ್ನು ನೋಡಿ ಪರಿಶೀಲನೆ ಮಾಡಿ ಚಕಬಂದಿ ಬಗ್ಗೆ ಲಿಖಿತ ದಾಖಲೆ ಹಾಜರ ಮಾಡಬಲ್ಲೆ. ನಾನು ಸ್ಥಾನಿಕವಾಗಿ ಸದರಿ ಜಾಗವನ್ನು ಹೋಗಿ ನೋಡಿದ್ದೇನೆ. ಆದರೆ ಅದನ್ನು ನನ್ನ ಸಮಕ್ಷಮದಲ್ಲಿ ಅಳತೆ ಮಾಡಿಸಿಲ್ಲ. ಅದರ ಚಕಬಂದಿಯನ್ನೂ ಸಹ ನಾನು ಪರಿಶೀಲನೆ ಮಾಡಿಲ್ಲ. ಶಿವಾನಂದ ಜಿರಲಿ ಇವರ ಆಸ್ತಿಯ ಪೂರ್ವಕ್ಕೆ ಹಳ್ಳ ಇರುತ್ತದೆ. ಆ ಹಳ್ಳ ಇದೆ ಎಂದು ತೋರಿಸಲು ನನ್ನ ಬಳಿ ದಾಖಲೆ ಈಗ ಇರುವುದಿಲ್ಲ. ಅದನ್ನು ನಾನು ಹಾಜರ ಮಾಡಬಲ್ಲೆ. ಹಾಗೂ ಸದರಿ ಬ್ರಿಡ್ಜ ಪೂರ್ವ ಪಶ್ಚಿಮ ಎಷ್ಟು ಅಡಿ ಉದ್ದ ಇದೆ ಎಂದು ನನಗೆ ಹೇಳಲು ಬರುವುದಿಲ್ಲ. ಭೂಮಾಪನ ಇಲಾಖೆಯವರು ಕೊಟ್ಟಂತಹ ರಿಪೋರ್ಟ ಇದ್ದು ಅದನ್ನು ಪರಿಶೀಲನೆ ಮಾಡಬಹುದು ಎಂದು ಹೇಳುತ್ತಾರೆ. ಸದರಿ ಹಳ್ಳ ಎಷ್ಟು ಅಡಿ ಉದ್ದ ಇದೆ ಎಂದು ನನಗೆ ಹೇಳಲು ಬರುವುದಿಲ್ಲ. ಬೆಳವಿ ರಸ್ತೆಯ ಬ್ರಿಡ್ಜ ಪೂರ್ವ ಪಶ್ಚಿಮ ಅಗಲ ಎಷ್ಟು ಇದೆ ಎಂದು ಹೇಳಲು ಬರುವುದಿಲ್ಲ.

6. ಬೆಳವಿ ರಸ್ತೆ ಎಲ್ಲಿಂದ ಎಲ್ಲಿಯವರಗೆ ಇದೆ ಎಂದು ನನಗೆ ಹೇಳಲು ಬರುವುದಿಲ್ಲ. ಬೆಳವಿ ರಸ್ತೆಯ ಕಾಮಗಾರಿ ಮಾಡಿದ ಬಗ್ಗೆ ಅಥವಾ ಹಣ ಖರ್ಚು ಮಾಡಿದ ಬಗ್ಗೆ ಪುರಸಭೆಯಲ್ಲಿ ದಾಖಲೆ ಇದೆಯಾ ಎಂಬ ಪ್ರಶ್ನೆಗೆ ಪರಿಶೀಲನೆ ಮಾಡಿ ಹೇಳುತ್ತೇನೆ ಎಂದು ಹೇಳುತ್ತಾರೆ. ಹುಕ್ಕೇರಿ ಘಟಪ್ರಭಾ ರಸ್ತೆಯ ಎರಡೂ ಬದಿಗೆ ಬೆಳವಿ ರಸ್ತೆ ಬರುತ್ತದೆ. ಘಟಪ್ರಭಾ ರಸ್ತೆಯಿಂದ ಬೆಳವಿ ರಸ್ತೆಗೆ ಹೋಗಲು ಅಲ್ಲಿ ಬ್ರಿಡ್ಜ ಅಥವಾ ಅಂಡರ ಪಾಸ್ ಇರುವುದಿಲ್ಲ ಎಂದರೆ ಸಾಕ್ಷಿ ಪಿ ಡಬ್ಲ್ಯೂ ಡಿ

ಇಲಾಖೆಯವರಿಗೆ ವಿಚಾರ ಮಾಡಿ ಹೇಳುತ್ತೇನೆ ಎಂದು ಹೇಳುತ್ತಾರೆ. ಈಗ ಬೆಳವಿ ರಸ್ತೆಯಿಂದ ಹುಕ್ಕೇರಿ ರಸ್ತೆಗೆ ಹೋಗಲು ಯಾವುದೇ ಅಂಡರ ಪಾಸ್ ಅಥವಾ ಬ್ರಿಡ್ಜ ಇರುವುದಿಲ್ಲ . ಬೆಳವಿ ರಸ್ತೆ ಗ್ರಾಮೀಣ ಅಭಿವೃದ್ದಿ ಇಲಾಖೆಗೆ ಸಂಬಂಧ ಪಡುತ್ತದೆ. ಗ್ರಾಮೀಣ ಅಭಿವೃದ್ದಿ ಇಲಾಖೆಗೆ ಸಂಬಂಧ ಪಡುತ್ತದೆ ಎಂದು ತೋರಿಸಲು ನನ ಬಳಿ ದಾಖಲೆ ಇರುವುದಿಲ್ಲ,ಅದನ್ನು ಪರಿಶೀಲನೆ ಮಾಡಿ ಹೇಳುತ್ತೇನೆ. ಸದರಿ ಇಲಾಖೆಯವರು ಆ ರಸ್ತೆ ತಮ್ಮ ಇಲಾಖೆಗೆ ಬರುತ್ತದೆ ಎಂದು ನನಗೆ ಯಾವುದೇ ಲಿಖಿತವಾದ ಹಿಂಬರಹ ಕೊಟ್ಟಿರುವುದಿಲ್ಲ. ಸದರಿ ಇಲಾಖೆಯವರು ತಮ್ಮ ರಸ್ತೆ ಅತಿಕ್ರಮಣ ಆಗಿದೆ ಎಂದು ನಮಗೆ ಯಾವುದೇ ಲಿಖಿತವಾಗಿ ದೂರು ಕೊಟ್ಟಿರುವುದಿಲ್ಲ. ವಾದಿಯ ಆಸ್ತಿಯ ಪೂರ್ವಕ್ಕೆ ದಕ್ಷಿಣೋತ್ತರವಾಗಿ ಗಟಾರು ಬರುತ್ತದೆ ಎಂದರೆ ನಿಜ. ಸದರಿ ಗಟಾರು ನೀರು ಉತ್ತರದಿಂದ ಇಳಿಜಾರಿನಲ್ಲಿ ಹರಿಯುತ್ತದೆ ಎಂದರೆ ನಿಜ. ಘಟಪ್ರಭಾ ರಸ್ತೆಯ ದಕ್ಷಿಣಕ್ಕೆ ಇರುವ ಹುಕ್ಕೇರಿ ಪೋಲಿಸ ಠಾಣೆ ನೀರೂ ಸಹ ಅದೇ ಗಟಾರಕ್ಕೆ ಕೂಡುತ್ತದೆ ಎಂದರೆ ನಿಜ. ಗಟಾರವನ್ನು ಪುರಸಭೆಯರವರೇ ನಿರ್ಮಿಸಿರುತ್ತಾರೆ ಎಂದರೆ ಸಾಕ್ಷಿ ಅದನ್ನು ನಾನು ಪರಿಶೀಲನೆ ಮಾಡಿ ಹೇಬೇಕಾಗುತ್ತದೆ ಎಂದು ಹೇಳುತ್ತಾರೆ.

**( ವಾದಿ ಪರ ವಕೀಲರು ಮುಂದುವರೆದ ವಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.)**

**( ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆಳರಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಅದೇ**

(ಆದಿತ್ಯ ಆರ್. ಕಲಾಲ್)
ಸಿ ಜೆ ಮತ್ತು ಜೆ ಎಂ ಎಫ್ ಸಿ , ಹುಕ್ಕೇರಿ